
ಮೊನಾಲಿಸಾ. ಎರಡನೆಯದು ಎಲ್ಲ ಮಾಧ್ಯಮಗಳಿಗೂ ಒಗ್ಗುವಂತಹ ಏಕೈಕ ವ್ಯಕ್ತಿ: ಗಾಂಧೀಜಿ. ಫ್ರಿಜ್ ಸ್ಟಿಕರ್, ಪೋಸ್ಟ್ ಕಾರ್ಡ್, ಪೋಸ್ಟರ್‌ಗಳು, ಆರ್.ಬಿ.ಐ. ನೋಟುಗಳು, ಸಮಕಾಲೀನ ವಿಷಯಗಳು (ಪರಿಸರವಾದ, ಎಥಿಕ್ಸ್, ರಾಜಕೀಯ, ಶಿಕ್ಷಣ, ಸಮಾಜವಾದದಿಂದ ಧಾರ್ಮಿಕ ಚಿಂತನೆಯವರೆಗೂ), ರೇಖಾಚಿತ್ರಗಳಿಂದ ಪ್ರತಿಷ್ಠಾಪನಾ ಶಿಲ್ಪಗಳವರೆಗೂ, ಪರಸ್ಪರ ಒಗ್ಗದ ವರ್ಗಗಳ ಎಲ್ಲ ತೆರನಾದ ನಿರೂಪಣಾ ದೃಶ್ಯಮಾಧ್ಯಮ ಹಾಗೂ ವಿಷಯಗಳಿಗೂ ಗಾಂಧಿ ಎಲ್ಲೆಡೆ, ಭಾರತದಾಚೆಗೂ ಒಗ್ಗಿ ಬರುವ ವಿಷಯವಾಗಿದ್ದಾರೆ. ಗಾಂಧಿ ಚಿತ್ರವಾಗದ, ಗೋಚರವಾಗದೆಡೆ ಬರವಣಿಗೆಯ ಮೂಲಕ ಅವರ ಚಿಂತನೆಯನ್ನು ಉದ್ಧರಿಸಲಾಗುತ್ತಿದೆ.

ಗಾಂಧಿಯ ಚಿತ್ರಗಳ ವಿಶೇಷ ಇರುವುದೇ ಇಲ್ಲಿ: ಅವರ ಚಿತ್ರಗಳು ಎತ್ತರದ ಹೆಮ್ಮರದಂತೆ ಉದ್ದನೆಯ ಹೀರೊಯಿಕ್ ನಿರೂಪಣೆಗಳಲ್ಲ; ಅವು ಅಗಲಕ್ಕೆ ಹರಡುವ, ಎಲ್ಲರಿಗೂ ಹರಡುವ ಬಳ್ಳಿಗಳಂತೆ. ಎತ್ತರದ ಕಟ್ಟಡಗಳನ್ನು ಸುಲಭಕ್ಕೆ ಹೊಡೆದು ಉರುಳಿಸಬಹುದು, ಆದರೆ ಬಟ್ಟೆಯ ನೇಯ್ಗೆಯಾದುದನ್ನು ಒಡೆಯಲು ಹೋದರೆ, ವಸ್ತ್ರವೇ ಹಾಳಾದೀತು. ಆಧುನಿಕತೆಯು ಎತ್ತರದ ಏಕಶಿಲಾ ನಿರ್ಮಿತಿಗಳಾದರೆ, ಆಧುನಿಕೋತ್ತರ ಸಮಕಾಲೀನತೆಯು ಅಗಲಕ್ಕೆ ಹರಡುವ ಪ್ರಕ್ರಿಯೆ. ಈ ಅರ್ಥದಲ್ಲಿ ಗಾಂಧೀಜಿ ಎಂಬ ದೃಶ್ಯ ಪರಿಕಲ್ಪನೆಯು, ವಿಕ್ಷಿಪ್ತವೆನಿಸಿದರೂ ದೂರದರ್ಶಕ/ ಜಂಗಮವಾಣಿಯನ್ನು ನೆನಪಿಸುತ್ತದೆ. ಇವೆರಡೂ ಎಲ್ಲೆಡೆ ಇವೆ, ಎಲ್ಲರಿಗೂ ಅವುಗಳು ಏನು ಮಾಡಬಹುದು ಎಂಬುದರ ಬಗ್ಗೆ ಆಸಕ್ತಿಯೇ ಹೊರತು ಅವುಗಳ ಆಕಾರವಲ್ಲ. 'ನಾನು ಗಾಂಧೀ ನಾಡಿನವನು' ಎಂದು ಭಾರತೀಯನೊಬ್ಬ ಜರ್ಮನ್ ಪ್ರಜೆಗೆ ಸರಳವಾಗಿ ಹೇಳಿದರೆ, ಅದು ದೊಡ್ಡ ತಾತ್ವಿಕ ರಾಜಕೀಯ ಚರ್ಚೆಯ ಆಹ್ವಾನವೂ ಆದೀತು. ಗಾಂಧಿ ಎಂಬ ಹೆಸರಿನ, ಚಿತ್ರದ ಹರಹು ಅಂತಹದ್ದು: ತಾತ್ವಿಕವಾಗಿರುವ ಗಾಂಧಿ ಚಿತ್ರ ನಿರೂಪಣೆಯ ಸಂಪ್ರದಾಯವು ನೋಡಲು ಸರಳ, ಸಹಜವಲ್ಲ. ಅದನ್ನು ಚೌಕಟ್ಟು ತೊಟ್ಟು ಸಂಗ್ರಹಾಲಯದಲ್ಲಿ ಬಂಧಿಸಲಾಗದು. ಏಕೆಂದರೆ ಕೇವಲ ದೊಡ್ಡ ದೊಡ್ಡ ಕಲಾವಿದರು ಮಾತ್ರ ಸೇರಿ ಬರೆದಿರುವ ಚಿತ್ರ ಅದಲ್ಲ.




ಬರ್ಮಿಂಗ್‌ಹ್ಯಾಂನ ಶಾಲೆಯೊಂದರಲ್ಲಿ ಗಾಂಧಿ–ಮಾರ್ಟಿನ್ ಲೂಥರ್ ಕಿಂಗ್ ಇಬ್ಬರನ್ನು ಒಟ್ಟಿಗೆ ತೋರಿಸಲಾದ ಪ್ರಶಸ್ತಿ ಪುರಸ್ಕೃತ ಚಿತ್ರ.

ಮೇಲು–ಕೀಳು ಎಂಬ ಎಲ್ಲ ವರ್ಗದ ಕಲಾವಿದರು, ಕರಕುಶಲ ಕರ್ಮಿಗಳು, ಸಾಂಪ್ರದಾಯಿಕ ಕಲಾವಿದರು ಎಂಬ ಭೇದವಿಲ್ಲದೆ ಬರೆದಿರುವ ಒಂದೇ ಒಂದು ಚಿತ್ರ ಎಂದರೆ, ಅದು ಗಾಂಧಿಯೇ. ಗಾಂಧಿ ಚಿತ್ರದ ಲೇಖಕರ ಹಕ್ಕು ಕಾಪಿ–ಲೆಫ್ಟ್ ಆದುದು, ಅದೇ ಚಿತ್ರ ಮತ್ತೆ ಮತ್ತೆ ಬೇರೆ ಬೇರೆ ಕಲಾವಿದರು, ಮೂಲ ಕಲಾವಿದರ ಪರಿಗಣಿಸದೆಯೂ ಪ್ರತಿಕೃತಿ ತೆಗೆಯುತ್ತಾರೆ. ಯಾರೂ ಅದನ್ನು ಆಕ್ಷೇಪಿಸರು. ಚಿತ್ರಣ ಉದ್ಯಮದ ನಡವಳಿಕೆಯನ್ನೇ ರೂಪಿಸುವ ಗುಣ ಗಾಂಧಿಯ ಚಿತ್ರಗಳ ಸತ್ವಕ್ಕಿದೆ. ಗಾಂಧಿಯ ಚಿತ್ರದ ಏಕಶಿಲಾನಿರ್ಮಿತಿಯಾಚೆಗಿನ ವಿಸ್ತೃತ ಹರಿವಿನ ಅತ್ಯಂತ ಸಹಜವಾದ ಸಾಂಕೇತಿಕ ಉದಾಹರಣೆಯೊಂದಿದೆ: ಬೆಂಗಳೂರಿನ ಗಾಂಧೀಭವನದಲ್ಲಿ ವೀಕ್ಷಕನೆಡೆಗೆ ಮುಂದಕ್ಕೆ